# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1187
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 29.12.2022
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519.6 ರಿಂದ 524.256 ರವರೆಗೆ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕೃಷ್ಣಾ ನ್ಯಾಯಾಧೀಕರಣ–2 ರ ಅಂತಿಮ ತೀರ್ಪಿನ ಅನ್ವಯ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರ ಅನುಷ್ಠಾನಕ್ಕಾಗಿ 130 ಟಿ.ಎಂ.ಸಿ. ನೀರಿನ ಹಂಚಿಕೆ ಆಗಿರುತ್ತದೆ. ಸದರಿ ನೀರಿನ ಬಳಕೆಗೆ ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್. 519.60 ಮೀ. ನಿಂದ ಆರ್.ಎಲ್. 524.256 ಮೀ. ರವರೆಗೆ ಎತ್ತರಿಸಲು ಕೃಷ್ಣಾ ನ್ಯಾಯಾಧಿಕರಣ–2 ರಲ್ಲಿ ಆದೇಶವಾಗಿರುತ್ತದೆ.<br><br>ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆಯನ್ನು ಆರ್.ಎಲ್. 524.256 ಮೀಟರ್‌ಗೆ ಎತ್ತರಿಸುವಿಕೆಯು ಕೃಷ್ಣಾ ನ್ಯಾಯಾಧಿಕರಣ–2ರ ಅಂತಿಮ ಐತೀರ್ಮ ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಮ ಅಧಿಸೂಚನೆಯಾಗಬೇಕಾಗಿದೆ.<br><br>ಕೃಷ್ಣಾ ನ್ಯಾಯಾಧೀಕರಣದ ವರದಿ ಹಾಗೂ ಮುಂದುವರೆದ ವರದಿಯ ವಿರುದ್ಧ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮನವಿ ಅರ್ಜಿಗಳನ್ನು ಹಾಗೂ ಕರ್ನಾಟಕ ರಾಜ್ಯವು ಮುಂದುವರೆದ ವರದಿಯ ಕೆಲವು ಅಂಶಗಳ ವಿರುದ್ಧ ವಿಶೇಷ ಮನವಿ ಅರ್ಜಿಯನ್ನು ಸಲ್ಲಿಸಿದ್ದು, ಇವುಗಳು ಇತ್ಯರ್ಥವಾಗಬೇಕಾಗಿವೆ.<br><br>ಆಂಧ್ರಪ್ರದೇಶ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿ 10498/2011 ಅಡಿಯಲ್ಲಿ ಸಲ್ಲಿಸಿದ್ದ ಮಧ್ಯಕಾಲಿನ ಅರ್ಜಿ 3 ರ ಬಗ್ಗೆ ದಿನಾಂಕ:16.09.2011 ರಂದು ಹೊರಡಿಸಿರುವ ಆದೇಶದಲ್ಲಿ ಸೆಕ್ಷನ್ 5(3) ಅಡಿಯಲ್ಲಿ ಕಣಿವೆ ರಾಜ್ಯಗಳು ಸಲ್ಲಿಸಿರುವ ರೆಫರೆನ್ಸ್ ಅರ್ಜಿಗಳ ವಿಚಾರಣೆಯನ್ನು ತಡೆಯದೆ, ಸದರಿ ವಿಷಯಕ್ಕೆ ವಿವರವಾದ ಪರಿಗಣನೆಯ ಅಗತ್ಯವಿದೆ ಎಂದು ಪರಿಗಣಿಸಿ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2 ರ ಸೆಕ್ಷನ್ 5(3) ಅಡಿಯಲ್ಲಿ ನೀಡುವ ತೀರ್ಪು/ ವರದಿಯನ್ನು ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್ ಪ್ರಕಟಿಸದಂತೆ ಆದೇಶಿಸಿರುತ್ತದೆ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ.16.09.2011ರ ಆದೇಶವನ್ನು ಮಾರ್ಪಡಿಸುವಂತೆ ಕೋರಲು ಹಾಗೂ ಕೃಷ್ಣಾ ನ್ಯಾಯಾಧಿಕರಣ–2 ನೀಡಿರುವ ಆದೇಶದ ವರದಿಯನ್ನು ಕೇಂದ್ರ ಸರ್ಕಾರವು ಗೆಜೆಟ್‌ನಲ್ಲಿ ಪ್ರಕಟಿಸಲು ಅನುವಾಗುವಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸೂಕ್ತ ಅರ್ಜಿಯನ್ನು ಸಲ್ಲಿಸಲು ಅಗತ್ಯ ಕ್ರಮ ತೆಗೆದು ಕೊಳ್ಳುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದೆ.<br><br>ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ತೀರ್ಪನ್ನು ಗೆಜೆಟ್ ಪ್ರಕಟಣೆ ಕುರಿತಂತೆ ಮಹಾರಾಷ್ಟ್ರ ರಾಜ್ಯವು ದಿನಾಂಕ:25.08.2014ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ಮುಂದೆ ಸಲ್ಲಿಸಿದ್ದ ಮದ್ಯಕಾಲೀನ ಅರ್ಜಿಯನ್ನು ಬೆಂಬಲಿಸಿ, ರಾಜ್ಯ ಸರ್ಕಾರವು ದಿನಾಂಕ:24.09.2014 ರಂದು ಕೌಂಟರ್ ಅಫಿಡೆವಿಟ್ ಅನ್ನು ಸಲ್ಲಿಸಿ, ಅಂತಿಮ ಆದೇಶವನ್ನು ಗೆಜೆಟ್ ಪ್ರಕಟಣೆ ಮಾಡಲು ಕೋರಿರುತ್ತದೆ.<br><br>ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇರುವ ವಿಶೇಷ ಮನವಿ ಅರ್ಜಿಗಳ ನಿರ್ಣಯಕ್ಕೊಳಪಟ್ಟು ದಿನಾಂಕ:29.11.2013 ರಂದು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–2 ನೀಡಿರುವ ಅಂತಿಮ ಆದೇಶವನ್ನು ಗೆಜೆಟ್ ಪ್ರಕಟಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಲು ಕರ್ನಾಟಕ ರಾಜ್ಯವು ದಿನಾಂಕ:18.02.2019 ರಂದು ವಿಶೇಷ ಮನವಿ ಅರ್ಜಿಯಡಿಯಲ್ಲಿ ಮಧ್ಯಕಾಲೀನ ಅರ್ಜಿಯನ್ನು ಹಾಗೂ ಮಧ್ಯಕಾಲೀನ ಅರ್ಜಿಯಲ್ಲಿ ಹೆಚ್ಚುವರಿ ಶಪಥ ಪತ್ರವನ್ನು ದಿನಾಂಕ:08.11.2021 ರಂದು ದಾಖಲಿಸಿದೆ.<br><br>ರಾಜ್ಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮಧ್ಯಕಾಲಿನ ಅರ್ಜಿಗಳು ಹಾಗೂ ವಿಶೇಷ ಅನುಮತಿ ಅರ್ಜಿಗಳು **(SLP) ದಿನಾಂಕ:06.12.2022 ರಂದು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಚಾರಣೆ ಜರುಗಿದ್ದು ದಾವೆಗಳ ಮುಂದಿನ ವಿಚಾರಣೆಯು ದಿನಾಂಕ:10.01.2023 ರಂದು ನಿಗದಿಯಾಗಿರುತ್ತದೆ.**<br><br>**ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ತೀರ್ಪು ಗೆಜೆಟ್ ಅಧಿಸೂಚನೆ ಪ್ರಕಟಣೆ ಆದ ನಂತರ ಯೋಜನೆಯ ವಿವರವಾದ ಯೋಜನಾ ವರದಿಗೆ ಸಕ್ಷಮ ಪ್ರಾಧಿಕಾರಗಳ ತಿರುವಳಿಯೊಂದಿಗೆ ಆಲಮಟ್ಟಿ ಆಣೆಕಟ್ಟಿನ ಎತ್ತರವನ್ನು 519.60 ಮೀ. ದಿಂದ 524.256 ಮೀ. ಗೆ ಎತ್ತರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುವುದು.** |
| ಆ | ಕೃಷ್ಣಾ ನ್ಯಾಯಾಧೀಕರಣ–2 ರಲ್ಲಿ ರಾಜ್ಯಕ್ಕೆ ಎಷ್ಟು ಟಿಎಂಸಿ ನೀರನ್ನು ಒದಗಿಸಲಾಗಿದೆ. ಈ ಪೈಕಿ ನೀರಿನ ಬಳಕೆಯನ್ನು ಮಾಡಲು ಯೋಜಿಸಲಾಗಿರುವ ಯೋಜನೆಗಳೇನು; (ವಿವರ ನೀಡುವುದು) | ಕೃಷ್ಣಾ ನ್ಯಾಯಾಧಿಕರಣ–2 ದಿನಾಂಕ:29.11.2013 ರಂದು ಕಾಯ್ದೆಯ ಸೆಕ್ಷನ್ 5(3) ಅಡಿಯಲ್ಲಿ ತನ್ನ ಮುಂದುವರೆದ ಹಾಗೂ ಅಂತಿಮ ತೀರ್ಪಿನ ಮೇರೆಗೆ ಕರ್ನಾಟಕ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರಿನ ಪ್ರಮಾಣ 173 ಟಿಎಂಸಿ (ನದಿ ಪಾತ್ರದಡಿ ನೈಸರ್ಗಿಕ ಹರಿವು 7 ಟಿಎಂಸಿ ಸೇರಿದಂತೆ) ರಡಿ ಈ ಕೆಳಗಿನ ಯೋಜನೆಗಳು ಒಳಗೊಂಡಿದೆ :<br><br>(ಅ) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 : 173 ಟಿಎಂಸಿ.<br>(ಆ) ಸಿಂಗಟಾಲೂರು ಏತ ನೀರಾವರಿ : 16 ಟಿಎಂಸಿ.<br>(ಇ) ಭದ್ರಾ ಮೇಲ್ದಂಡೆ ಯೋಜನೆ : 9 ಟಿಎಂಸಿ.<br>(ಈ) ತುಂಗಾ ಮೇಲ್ದಂಡೆ ಯೋಜನೆ : 11 ಟಿಎಂಸಿ.<br>ಒಟ್ಟು :: 166 ಟಿಎಂಸಿ |
| ಇ | 2022–23ನೇ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು? (ವಿವರ ನೀಡುವುದು) | 2022–23ನೇ ಸಾಲಿನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯಲ್ಲಿನ ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ಸಂಬಂಧಿಸಿದ ಇತರೆ ಯೋಜನೆಗಳಿಗೆ ಇಲ್ಲಿಯವರೆಗೆ ಒಟ್ಟು ರೂ.4360.95 ಕೋಟಿ (ರೂ.871.77 ಕೋಟಿಗಳು ಸಾಲ ಮರುಪಾವತಿ ಒಳಗೊಂಡಂತೆ) ಅನುದಾನ ಬಿಡುಗಡೆ ಮಾಡಲಾಗಿದೆ. |

ಸಂಖ್ಯೆ:ಜಸಂಇ 141 ಡಬ್ಲ್ಯೂಬಿಎಂ 2022

(ಗೋವಿಂದ ಎಂ.ಕಾರಜೋಳ)
ಜಲಸಂಪನ್ಮೂಲ ಸಚಿವರು.